ಭಾರತ ಸರ್ಕಾರದ ರಾಜ್ಯಪತ್ರ ದಿನಾಂಕ : 10–9–2004ರ ಅಧಿಸೂಚನೆಯಂತೆ 5,000–00ಗಳ ವರೆಗಿನ ವ್ಯವಹಾರಗಳಿಗೆ ರೆವಿನ್ಯೂ ಸ್ಟ್ಯಾಂಪ್ ವಿನಾಯಿತಿ ನೀಡಿದೆ.

ರೂ. 5,000/– ಕ್ಕಿಂತ ಮೇಲ್ಪಟ್ಟ ವ್ಯವಹಾರಗಳಿಗೆ ರೆವಿನ್ಯೂ ಸ್ಟ್ಯಾಂಪ್ ಬಳಕೆ ಅವಶ್ಯವಿರುವುದರಿಂದ ಬ್ಯಾಂಕ್ ಹಾಗೂ ಇತರೆ ಸಂಸ್ಥೆಗಳು ಇಡಿಯಾಗಿ ರೆವಿನ್ಯೂ ಸ್ಟ್ಯಾಂಪ್ ಹಣವನ್ನು ಲೆಕ್ಕ ಶೀರ್ಷಿಕೆ 0030–02–800–0–01ಗೆ ಪಾವತಿಸಬಹುದಾಗಿದೆ.

ರೆವಿನ್ಯೂ ಸ್ಟ್ಯಾಂಪ್‌ಗಳನ್ನು ಸಾರ್ವಜನಿಕರಿಗೆ ಪೋಸ್ಟ್ ಆಫೀಸ್ ಮೂಲಕ ಮಾರಾಟ ಮಾಡಲು ಪರಿಶೀಲಿಸಲಾಗುತ್ತಿದೆ.

ಆ) ಇಲ್ಲ

ಇ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಮೇಲಿನಂತೆ

ಉ) ಈಗಾಗಲೇ ಬಾಂಡು ಪೇಪರುಗಳ ಪೂರೈಕೆಯನ್ನು SBM, SBI, SBH ಈ ಬ್ಯಾಂಕುಗಳಲ್ಲಿ ವಿತರಿಸಲು ಅನುಮತಿ ನೀಡಲಾಗಿದೆ. ಕರ್ನಾಟಕ ಬ್ಯಾಂಕಿಗೂ ಅನುಮತಿ ನೀಡಲು ಕ್ರಮ ಕೈಗೊಂಡಿದೆ.

ಊ) SBM, SBI, SBH ಈ ಮೂರು ರಾಷ್ಟ್ರೀಕೃತ ಬ್ಯಾಂಕುಗಳು ರಾಜ್ಯಾದ್ಯಂತ ಇರುತ್ತದೆ. ಇವುಗಳು ಮಾತ್ರ ಟ್ರೆಜರಿ ಬ್ಯಾಂಕುಗಳಾಗಿರುತ್ತವೆ. ಸಂಬಂಧಿಸಿದ ಉಪ ನೋಂದಣಿ ಕಛೇರಿಗಳಲ್ಲಿ ಮುದ್ರಾಂಕ ಶುಲ್ಕ ತೆಗೆದುಕೊಳ್ಳಲಿಲ್ಲ ಕ್ರಮ ಕೈಗೊಂಡಿದೆ.

776(722) ಶ್ರೀ ನಿರ್ಮಲ್ ಸುರಾನಾ (ಭಾರತಿನಗರ) : ಮಾನ್ಯ ಕೃಷಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪರ್ಯಾಯ ಇಂಧನವಾಗಿ ಹೊಂಗೆ ಎಣ್ಣೆಯನ್ನು ವಾಹನಗಳಿಗೆ ಬಳಸುವುದು ಅಗತ್ಯವಾಗಿರುವ ಪ್ರಾಯೋಗಿಕ ಪರೀಕ್ಷೆಗಳು ಯಾವ ಹಂತದಲ್ಲಿವೆ ?

ಆ) ಬಳಕೆಗೆ ಹೊಂಗೆ ಎಣ್ಣೆ ಯೋಗ್ಯವೆಂದಾದಲ್ಲಿ ಸರ್ಕಾರ ಹೊಂಗೆ ಕೃಷಿಗೆ ನೀಡಲಾಗುವ ಪ್ರೋತ್ಸಾಹವೇನು ?

ಇ) ಹೊಂಗೆ ಕೃಷಿ ಮಾಡಲು ಮುಂದೆ ಬರುವ ರೈತ ಫಲಾನುಭವಿಗೆ ಸರ್ಕಾರಿ ಜಮೀನನ್ನು ದೀರ್ಘ ಗುತ್ತಿಗೆ ಆಧಾರದ ಮೇಲೆ ಅಥವಾ ರಿಯಾಯಿತಿ ದರದಲ್ಲಿ ಕ್ರಯಕ್ಕೆ ನೀಡುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ ?

ಈ) ಹೌದಾದಲ್ಲಿ, ಹೊಂಗೆ ಕೃಷಿಕರು ಕೃಷಿ ಆಸಕ್ತರು ಪೂರೈಸಬೇಕಾದ ವಿಧಿವಿಧಾನ ಮತ್ತು ಷರತ್ತುಗಳೇನು? (ವಿವರ ನೀಡುವುದು)

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಪರ್ಯಾಯ ಇಂಧನವಾಗಿ ಹೊಂಗೆ ಎಣ್ಣೆಯನ್ನು ವಾಹನಗಳಿಗೆ ಬಳಸುವ ಬಗ್ಗೆ ಕೃಷಿ ಇಲಾಖೆಯು ಯಾವುದೇ ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದು ಕೊಂಡಿರುವುದಿಲ್ಲ.

ಆ) ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ ಧಾರವಾಡ & ಬೆಂಗಳೂರು ಹಾಗೂ ಸೂತ್ರ ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು ಜಂಟಿಯಾಗಿ ರಾಜ್ಯದಲ್ಲಿ ಜೈವಿಕ

ಇಂಧನ ಮರಗಳ ಅಭಿವೃದ್ಧಿಗಾಗಿ ಒಟ್ಟು ರೂ 3.0 ಕೋಟಿಯ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿವೆ. ಈ ಪ್ರಸ್ತಾವನೆಯಲ್ಲಿ ಕೆಳಕಂಡ ಕಾರ್ಯಕ್ರಮಗಳಿರುತ್ತವೆ ;

1. ರಾಜ್ಯದಲ್ಲಿ ಹೊಂಗೆ ಜೊತೆಗೆ ಜತ್ರೋವಾ, ಬೇವು ಮತ್ತು ಹಿಪ್ಪೆಯ ಉತ್ಕೃಷ್ಟ ಮರಗಳನ್ನು ಗುರುತಿಸುವುದು.

2. ಅಧಿಕ ಪ್ರಮಾಣದಲ್ಲಿ ಈ ನಾಲ್ಕು ಮರಗಳ ಸಸಿಗಳ ಉತ್ಪಾದನೆಗಾಗಿ ಕಸಿ ಕಟ್ಟುವಿಕೆ ಹಾಗೂ ಅಲೈಂಗಿಕ (clonally) ಪದ್ಧತಿಗಳ ತಾಂತ್ರಿಕತೆಯನ್ನು ಕ್ರಮಬದ್ಧಗೊಳಿಸುವುದು.

3. ಈ ಎರಡು ವಿಧಾನಗಳಿಂದ ಅಭಿವೃದ್ಧಿ ಪಡಿಸಿದ ನಾಲ್ಕು ಜಾತಿಯ ಮರಗಳ ಸಸಿಗಳನ್ನು ಉತ್ಪಾದನೆ ಮಾಡಿ ಸರಬರಾಜು ಮಾಡುವುದು.

4. ಈ ಎರಡೂ ವಿಧಾನಗಳಿಂದ ಅಭಿವೃದ್ಧಿ ಪಡಿಸಿದ ಸಸಿಗಳ ಬಗ್ಗೆ ರೈತರಿಗೆ ಪ್ರಚಾರ ತರಬೇತಿ ನೀಡುವುದು ಹಾಗೂ ಅವರ ಹೊಲಗಳಲ್ಲಿ ಬೆಳಸುವುದು.

5. ಸ್ಥಾನೀಯ ಯುವಕರಿಗೆ ಎಣ್ಣೆ ಉತ್ಪಾದನೆ, ವಿವಿಧ ಉತ್ಪನ್ನಗಳು ಮಾರಾಟ, ಎಣ್ಣೆಯನ್ನು ಇಂಜಿನುಗಳಲ್ಲಿ ಬಳಕೆ ಹಾಗೂ ಇಂಜಿನ್ನುಗಳ ನಿರ್ವಹಣೆ ಬಗ್ಗೆ ತರಬೇತಿ ನೀಡುವುದು.

ಈಯೋಜನೆಯಡಿಯಲ್ಲಿ ಮೇಲಿನ ವಿವಿಧ ಸಂಸ್ಥೆಗಳ ಮೂಲಕ ಒಟ್ಟು ರೂ. 50 ಲಕ್ಷ ಉತ್ಕೃಷ್ಟ ಹೊಂಗೆ ಸಸಿಗಳನ್ನು ಉತ್ಪಾದಿಸಿ, ರೈತರಿಗೆ ನಾಟಿ ಮಾಡಲು ಒದಗಿಸಲು ಕ್ರಮ ಕೈಗೊಂಡಿದೆ. ಇದಕ್ಕೆ ಒಟ್ಟು 2 ಸಾವಿರ ಉತ್ಕೃಷ್ಟ ಹೊಂಗೆ ಮರಗಳನ್ನು ಗುರುತಿಸಿ, ಬೀಜ ಶೇಖರಣೆ ಮಾಡಲು ಸೂಕ್ತ ಮಾರ್ಗದರ್ಶನ ನೀಡಿದ್ದು, ಕ್ರಮ ಕೈಗೊಂಡಿರುತ್ತಾರೆ. ಸದರಿ ಬೀಜಗಳಿಂದ ಉತ್ಕೃಷ್ಟ ಹೊಂಗೆ ಸಸಿಗಳನ್ನು ತಯಾರಿಸಲಾಗುವುದು. ಮೇಲಿನ ಸಂಸ್ಥೆಗಳು ಹಾಗೂ ಸ್ವಸಹಾಯ ಗುಂಪುಗಳ ಮೂಲಕ ರೈತರ ಜಮೀನುಗಳಲ್ಲಿ ನಾಟಿ ಮಾಡಲು ಅವರಿಗೆ ಒದಗಿಸಲಾಗುವುದು ಹಾಗೂ ರಾಜ್ಯದ ಬರಡು ಭೂಮಿ, ಬೀಳು ಭೂಮಿ, ನಗ್ನಾವಸ್ಥೆಯಲ್ಲಿರುವ ಅರಣ್ಯಗಳು, ಸಸ್ಯವಿಲ್ಲದೆ ಗುಡ್ಡಗಾಡು ಮತ್ತು ಕಡಿಮೆ ಇಳುವರಿ ನೀಡುವ ಖುಷ್ಕಿ ಜಮೀನುಗಳಲ್ಲಿ ಈ ಸಸಿಗಳನ್ನು ನಾಟಿ ಮಾಡಲಾಗುವುದು.

ಇ) ಇಲ್ಲ

ಈ) ಅನ್ವಯಿಸುವುದಿಲ್ಲ.

777(726) ಶ್ರೀ ನಿರ್ಮಲ್ ಸುರಾನ (ಭಾರತೀನಗರ) : ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಆಶ್ರಯ/ಅಂಬೇಡ್ಕರ್ ಮತ್ತು ವಾಂಬೇ ಯೋಜನೆಯಡಿ ಮನೆ ಸಾಲ ಪಡೆದ ಫಲಾನಿಭವಿಗಳ ಮನೆ ಸಾಲದ ಮೇಲಿನ ಬಡ್ಡಿ ದರವನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ವಿಧಿಸುವ ಬಡ್ಡಿ ದರಕ್ಕೆ ಸಮನಾಂತರವಾಗಿ ವಿಧಿಸಲು ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ವಿತರಿಸಲಾದ ಸಾಲದ ಮೇಲಿನ ಬಡ್ಡಿಗೂ ಅನ್ವಯಿಸಬೇಕು ಎಂಬುದರ ಬಗ್ಗೆ ಸರ್ಕಾರದ ನಿಲುವೇನು ;

ಆ) ಈ ಸಂಬಂಧ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಅಂಜನಾಮೂರ್ತಿ (ವಸತಿ ಸಚಿವರು)

ಅ) ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ವಿಧಿಸುವ ಬಡ್ಡಿದರಕ್ಕೆ ಸಮಾನಾಂತರವಾಗಿ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದ ಫಲಾನುಭವಗಳ ಮನೆ ಸಾಲದ ಮೇಲಿನ ಬಡ್ಡಿಗೂ ಸಹ ಅನ್ವಯಿಸಬೇಕೆಂಬುದೇ ಸರ್ಕಾರದ ನಿಲುವಾಗಿದೆ. ಅದರಂತೆಯೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ